ಪಶು ಆಸ್ಪತ್ರೆ ಸಿಬ್ಬಂದಿ ಕೊರತೆ

814 (1340) ಶ್ರೀ ಸುಭಾಷ್ ಆರ್.ಗುತ್ತೇದಾರ್ (ಆಳಂದ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದದಲ್ಲಿರುವ ಪಶು ಸಂಗೋಪನಾ ಇಲಾಖೆ ಕಛೇರಿಯ ನಿವೇಶನದ ಅಳತೆ ಎಷ್ಟು (ಎಕರೆಗುಂಟೆ ವಿವರ ನೀಡುವುದು);

ಆ) ಆಳಂದ ತಾಲ್ಲೂಕಿನಲ್ಲಿರುವ ಒಟ್ಟು ಪಶು ಆಸ್ಪತ್ರೆಗಳು ಎಷ್ಟು;

ಇ) ಸದರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೊರತೆ ಇರುವ ವೈದ್ಯರ ಮತ್ತು ಸಿಬ್ಬಂದಿ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) 01 ಎಕರೆ – 05 ಗುಂಟೆ

ಆ) ಒಟ್ಟು 39 ಪಶು ಆಸ್ಪತ್ರೆ/ಚಿಕಿತ್ಸಾಲಯ ಕೇಂದ್ರಗಳಿರುತ್ತದೆ.

ಇ) ಹೌದು.

ಈ) **1. ಪಶುವೈದ್ಯಾಧಿಕಾರಿ ಹುದ್ದೆ :**

ವಿಶೇಷ ನೇರ ನೇಮಕಾತಿ ನಿಯಮದ ಮೂಲಕ 487 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲು ಕ್ರಮವಹಿಸಲಾಗುತ್ತಿದೆ. ಅದು ಕೂಡಲೇ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಈ ಸಂದರ್ಭದಲ್ಲಿ ಆಳಂದ ತಾಲ್ಲೂಕಿನಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

2. ಹಿರಿಯ ಪಶುವೈದ್ಯ ಪರೀಕ್ಷಕರು : ಪಶುವೈದ್ಯ ಪರೀಕ್ಷಕರ ಹುದ್ದೆಯಿಂದ ಹಿರಿಯ ಪಶುವೈದ್ಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡುವ ಪ್ರಕ್ರಿಯೆ ನಡೆಯುತ್ತಿದ್ದು, ಆಳಂದ ತಾಲ್ಲೂಕಿನ ಖಾಲಿ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು.

3. ಪಶುವೈದ್ಯ ಸಹಾಯಕರು : ನೇರ ನೇಮಕಾತಿ ಮೂಲಕ 642 ಪಶು ವೈದ್ಯ ಸಹಾಯಕರ ಹುದ್ದೆಗಳನ್ನು ನೇಮಕಾತಿ ಮಾಡಲು ಅನುಮತಿ ನೀಡಲಾಗಿದ್ದು, ನೇಮಕಾತಿ ಮಾಡುವ ಸಂದರ್ಭದಲ್ಲಿ ಆಳಂದ ತಾಲ್ಲೂಕಿನ ಖಾಲಿ ಇರುವ ಹುದ್ದೆಗಳನ್ನು ಆದ್ಯತೆ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು,

4. 'ಡಿ ದರ್ಜೆ' ನೌಕರರು : ಖಾಲಿ ಇರುವ 'ಡಿ ದರ್ಜೆ' ಹುದ್ದೆಗಳನ್ನು ಆದ್ಯತೆ ಮೇರೆಗೆ ಜಿಲ್ಲಾ ಉಪ ನಿರ್ದೇಶಕರ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇರೆಗೆ ತುಂಬಲು ಕ್ರಮ ವಹಿಸಲಾಗುವುದು.

ಶಿಕ್ಷಕರ ಸಂಖ್ಯೆ ಮತ್ತು ಕೊರತೆ

816 (1342) ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು (ವಿವರ ನೀಡುವುದು);

ಆ) ಈ ಶಾಲೆಗಳಲ್ಲಿ ವಿಜ್ಞಾನ, ಗಣಿತ, ಆಂಗ್ಲ ಭಾಷೆಗಳಿಗೆ ಶಿಕ್ಷಕರು ಇಲ್ಲದೆ ಇರುವ ಶಾಲೆಗಳು ಎಷ್ಟು (ವಿವರ ನೀಡುವುದು);

ಇ) ಈ ವಿಷಯಗಳಲ್ಲಿ ಅಭ್ಯಾಸ ವಂಚಿತ ವಿದ್ಯಾರ್ಥಿಗಳ ಗುಣಮಟ್ಟದ ಬಗ್ಗೆ ಸರ್ಕಾರ ಕೈಗೊಂಡಿರು ಕ್ರಮಗಳೇನು; (ವಿವರಣೆ ನೀಡುವುದು);

ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ)

- ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಮಂಜೂರಾದ ಹುದ್ದೆ ಒಟ್ಟು 1593. ಕಾರ್ಯನಿರ್ವಗಿಸುತ್ತಿರುವ ಶಿಕ್ಷಕರ ಸಂಖ್ಯೆ 1539. ಖಾಲಿ ಇರುವ ಹುದ್ದೆಗಳ ಸಂಖ್ಯೆ 54